# ಶಿವ ಮತ್ತು ಬುದ್ಧ: ನಿವೇದಿತೆಯ ಕಥನಕೌಶಲ


ಡಾ. ಹೆಚ್.ಎನ್. ಮುರಳೀಧರ

**ನಿವೇದಿತಾ ಬರೆದ ಒಂದು ಸಣ್ಣ ಗ್ರಂಥ, 'Siva and Buddha'. ಇದರಲ್ಲಿ ನಿವೇದಿತಾಳ ಕಥನಶೈಲಿಯ ಸೊಬಗನ್ನು ನೋಡಬಹುದು. ಈ ವಿಷಯವನ್ನು ಕುರಿತು ವಿಮರ್ಶಾತ್ಮಕವಾಗಿ ಬರೆದಿರುವ ಲೇಖಕರು ನಿವೃತ್ತ ಕನ್ನಡ ಪ್ರಾಧ್ಯಪಕರು. ಉತ್ತಮ ವಾಗ್ಮಿಗಳು ಹಾಗೂ ಲೇಖಕರಾಗಿರುವ ಅವರು ಅನೇಕ ಕನ್ನಡ ಕೃತಿಗಳನ್ನು ರಚಿಸಿದ್ದಾರೆ. ಅವರು ಬೆಂಗಳೂರು ರಾಮಕೃಷ್ಣ ಮಠದ ಭಕ್ತರು.**

ಗುರು ಸ್ವಾಮಿ ವಿವೇಕಾನಂದರ ಹಾಗೆಯೇ ಶಿಷ್ಯೆ ಸೋದರಿ ನಿವೇದಿತಾ ಪ್ರತಿಭೆಯ ಮುಖಗಳೂ ಆಯಾಮಗಳೂ ಹಲವಾರು. ಅವರ ಬದುಕು ಹಾಗೂ ಬರವಣಿಗೆಗಳ ಅಧ್ಯಯನ ನಮ್ಮ ಪಾಲಿಗೆ ಹಲವಾರು ಕುತೂಹಲದ ಪುಟಗಳನ್ನು ತೆರೆಯುತ್ತವೆ. ಒಂದು ನಿರ್ದಿಷ್ಟ ಭೌಗೋಳಿಕ ಹಾಗೂ ಸಾಂಸ್ಕೃತಿಕ ಪರಿಸರಗಳ ಮೂಲಕ ರೂಪುಗೊಂಡ ಪ್ರಜ್ಞೆಯೊಂದು ತನಗೆ ಅನ್ಯವಾದ ಸನ್ನಿವೇಶದ ಜೀವನವಿಧಾನ ಹಾಗೂ ಚಿಂತನಕ್ರಮಗಳನ್ನು ಹೇಗೆ ಅರಗಿಸಿಕೊಂಡು ಬೆಳೆಯಬಲ್ಲದು ಎನ್ನುವುದಕ್ಕೆ ಅವರೊಂದು ಅವಶ್ಯವಾದ ಉದಾಹರಣೆಯಾಗಿದ್ದಾರೆ. ಜಗತ್ತಿನ ವಿಭಿನ್ನ ಸಾಂಸ್ಕೃತಿಕ ಸಂದರ್ಭಗಳಲ್ಲಿ ನಿಷ್ಪನ್ನವಾದ ಕಾಣ್ಕೆಗಳನ್ನು ಪರಸ್ಪರ ತಾಕಲಾಟ-ಸಂಘರ್ಷಗಳಲ್ಲಿ ಎದುರಾಗಗದೆ ವಿಶ್ವಾತ್ಮಕ ಭಿತ್ತಿಯೊಂದರ ಹಿನ್ನೆಲೆಯಲ್ಲಿ ಅವೆಲ್ಲವನ್ನೂ ಸಮನ್ವಯಗೊಳಿಸಬಲ್ಲ ಒಂದು ಮಾದರಿಯಾಗಿಯೂ ಅವರು ನಮಗೆ ಎದುರಾಗುತ್ತಾರೆ. ಪೂರ್ವಪಶ್ಚಿಮಗಳ ನಡುವಿನ ಸೇತುವೆಯಾಗಿ ಅವರು ತಮ್ಮ ಗುರುದೇವನ ಧ್ಯೇಯೋದ್ದೇಶವನ್ನು ಮುಂದುವರಿಸಿದ ಬಗೆ ಇಂದು ಇತಿಹಾಸದ ಹೆಜ್ಜೆಗುರುತುಗಳಾಗಿವೆ.

ಸೋದರಿ ನಿವೇದಿತೆಯದು ಮುಖ್ಯವಾಗಿ ಒಂದು ಸಂಶ್ಲೇಷಣ ಪ್ರಜ್ಞೆ. ವಿಶ್ಲೇಷಣೆಯ ವಿಧಾನವನ್ನು ಅವರು ಧಾರಾಳವಾಗಿ ಅನುಸರಿಸಿರುವರೆಂಬುದು ನಿಜ. ಎಲ್ಲವನ್ನೂ ವಿಂಗಡಿಸಿಕೊಳ್ಳುವ ಕ್ರಮ ಅವರಲ್ಲಿದೆ. ಆದರೆ ಹೀಗೆ ಬಿಡಿಸಿಕೊಳ್ಳುವುದು ಮಾತ್ರ ವಿಶಾಲವಾದ ಪರಿಧಿಯೊಂದರಲ್ಲಿ ಎಲ್ಲವನ್ನೂ ಮತ್ತೆ ಕೂಡಿಸುವುದಕ್ಕೆ. ಹೀಗೆ ಕೂಡಿಸಿದಾಗ ವಿವಿಧೆಡೆಗಳಿಂದ ಬಂದ ಬಗೆಬಗೆಯ ಬಣ್ಣಗಳು ಅಲ್ಲಿ ಹೊಸದೊಂದು ಚಿತ್ರವನ್ನು ರಚಿಸುತ್ತವೆ. ಎಲ್ಲ ಸಾದೃಶ್ಯ-ವೈದೃಶ್ಯಗಳ ನಡುವೆ ಹೊಸದೊಂದು ಪ್ರೀತಿಯ ಸಹಬಾಳ್ವೆಯೊಂದರ ಅನಾವರಣವಾಗುತ್ತದೆ. ಚಿಂತನದ ಮಂಥನ ಅಮೃತದ ಹುಟ್ಟಿಗೆ ಕಾರಣವಾಗುವ ಮಾದರಿ ಅದು.

ನಿವೇದಿತೆಯ ಬರವಣಿಗೆಯ ಹರವು ವಿಸ್ತಾರವಾದುದು. ಅಲ್ಲಿ ವಸ್ತುವೈವಿಧ್ಯವಿರುವಂತೆಯೇ ಅಭಿವ್ಯಕ್ತಿ ಕ್ರಮದ ವೈವಿಧ್ಯವೂ ಇದೆ. ತಾತ್ತ್ವಿಕತೆಯೊಂದಿಗೆ ಕಥನಾತ್ಮಕತೆಯನ್ನು ಚಿಂತನೆಯ ಗಾಂಭೀರ್ಯದೊಂದಿಗೆ ಭಾವದ ಮೃದುಲಾಸ್ಯವನ್ನು ಮೇಳೈಸಿಕೊಂಡಿರುವ ನಿರೂಪಣೆ ಇಲ್ಲಿದೆ. ಈ ಹಿನ್ನೆಲೆಯಲ್ಲಿ ಅವರ ಕಿರುಬರಹವೊಂದನ್ನು ಅವಲೋಕಿಸುವ ಕಿರುಪ್ರಯತ್ನ ಇದು.




**'ಶಿವ ಮತ್ತು ಬುದ್ಧ'** ('Siva and Buddha') ಎಂಬ ಹೆಸರಿನ ಕಿರುಪುಸ್ತಕವೊಂದು ನಿವೇದಿತೆಯ ಮರಣಾನಂತರ ೧೯೧೯ ರಲ್ಲಿ ಮೊದಲ ಮುದ್ರಣವಾಗಿ ಪ್ರಕಟವಾಗಿದೆ. ಅವರ ಹಸ್ತಪ್ರತಿಗಳ ಕಡತದಲ್ಲಿ ದೊರೆತ ಈ ಕಥನಾತ್ಮಕ ಬರಹಗಳ ಪುಟಗಳನ್ನು ಕಲ್ಕತ್ತೆಯ ಉದ್ಬೋಧನ ಕಾರ್ಯಾಲಯ ಪ್ರಕಟಿಸಿದೆ. ಈ ಬಗೆಯ ಕಥನಗಳ ಸರಣಿಯೊಂದನ್ನು ಬರೆಯುವ ಉದ್ದೇಶ ಲೇಖಕಿಗೆ ಇದ್ದುದಾಗಿ ಕಂಡುಬರುವುದಿಲ್ಲವೆಂದೂ ಪ್ರಕಾಶಕರು ಅಭಿಪ್ರಾಯಪಡುತ್ತಾರೆ. ಹಿಂದೂ ಪೌರಾಣಿಕತೆಯ ಕಥನ ಹಾಗೂ ವ್ಯಕ್ತಿತ್ವಗಳ ಹಿಂದಿರುವ ಕೇಂದ್ರ ಆಶಯಗಳನ್ನು ಪಾಶ್ಚಾತ್ಯ ಓದುಗರಿಗೆ ಪರಿಚಯವಾಗುವುದು ಈ ಬರವಣಿಗೆಗಳ ಉದ್ದೇಶವಾಗಿದೆ. ಇಂತಹದೇ ಬರವಣಿಗೆಗಳ ಇನ್ನೊಂದು ಕೃತಿ 'Myths and Legends of the Hindus and Buddhists'. ಇದಕ್ಕಾಗಿ ಕೂಡ ನಿವೇದಿತೆ

ಕೆಲವು ಲೇಖನಗಳನ್ನು ಬರೆದಿದ್ದು ಅವರ ಕಾಲಾನಂತರ ಆನಂದ ಕೆ.ಕುಮಾರಸ್ವಾಮಿ ಅವರು ಇದಕ್ಕೆ ಇನ್ನೂ ಕೆಲವು ಕಥನಗಳನ್ನು ಬರೆದು ಸೇರಿಸಿದ ಬಳಿಕ ಪ್ರಕಟವಾಗಿದೆ.

ಶಿವನ ಪರಿಕಲ್ಪನೆಯನ್ನು ನಿವೇದಿತಾ ವ್ಯಾಖ್ಯಾನಿಸುವ ಕ್ರಮ ದಲ್ಲಿ ಒಂದು ವೈಧಾನಿಕತೆ ಇದೆ. ಪೌರಾಣಿಕತೆಯನ್ನು ನಾಡಿನ ಜನರ ಬದುಕಿನ ವಿನ್ಯಾಸ, ಭೌಗೋಳಿಕ ವಿವರಗಳು, ಲೌಕಿಕ ಹಾಗೂ ಲೋಕೋತ್ತರ ನಂಬಿಕೆಗಳ ಸ್ವರೂಪ ಇವುಗಳ ಸಮಗ್ರತೆಯ ಒಂದು ಭಾಗವಾಗಿ ಗ್ರಹಿಸುವ ಹಾಗೂ ವಿವರಿಸುವ ವೈಧಾನಿಕತೆ ಅದು. ಲೋಕದ ವಿನ್ಯಾಸದ ಮೂಲಕವೇ ಲೋಕೋತ್ತರವನ್ನು ಗ್ರಹಿಸುವ ವಿನ್ಯಾಸವೂ ಇದಾಗಿದೆ. ಹೀಗಾಗಿಯೇ ಪೌರ್ವಾತ್ಯ ತಾತ್ತ್ವಿಕತೆಗೂ ಪಾಶ್ಚಾತ್ಯ ತಾತ್ತ್ವಿಕತೆಗೂ ಇರುವ ಗುಣಾತ್ಮಕ ಅಂತರವನ್ನು ಗ್ರಹಿಸಲು ಅಗತ್ಯವಾದ ನೆಲೆಗಟ್ಟೊಂದನ್ನು ಕೂಡ ಇದು ನಿವೇದಿತೆಗೆ ಒದಗಿಸಿದೆ.

ಭಾರತೀಯ ತಾತ್ತ್ವಿಕತೆಯನ್ನು ನಿವೇದಿತಾ ಪ್ರವೇಶಿಸುವುದು 'ಕಾಡಿನ' ಮೂಲಕ. ಅರಣ್ಯ, ಯಜ್ಞ, ಮಂತ್ರಘೋಷ, ಅಗ್ನಿ ಮತ್ತು ಯಜ್ಞ-ಕುಂಡದ ಭಸ್ಮ ಕೂಡ ನಿವೇದಿತೆಯ ಪಾಲಿಗೆ ಕೇವಲ ಯಾಂತ್ರಿಕ ಆಚರಣೆಗೆ ಸಂಬಂಧಪಟ್ಟ ವಿವರಗಳಲ್ಲ. ಅವು ಮನುಷ್ಯನ ನಿಸರ್ಗದೊಂದಿಗೆ, ತನ್ಮೂಲಕ ದೈವತ್ವದೊಂದಿಗೆ ಏಕತೆಯನ್ನು ಸಾಧಿಸಲು ನೆರವಾಗುವ ಬದುಕಿನ ವಾಹಕಗಳು. ಅವರ ಪ್ರಕಾರ ತಪಸ್ವಿಯೊಬ್ಬನು ಭಸ್ಮೋದ್ಧೂಳಿತನಾಗುವುದೆಂದರೆ ಭಗವಂತನಿಂದ ತನ್ನನ್ನು ತಾನು ಆವರಿಸಿಕೊಳ್ಳುವುದು ಮತ್ತು ಜಗತ್ತಿನಿಂದ ತನ್ನನ್ನು ಬೇರ್ಪಡಿಸಿಕೊಳ್ಳುವುದು. ಆದರೆ ನಿವೇದಿತೆಯ ಗಮನಿಕೆ ಇಷ್ಟಕ್ಕೇ ನಿಲ್ಲುವುದಿಲ್ಲ. ಅವರು ತಮ್ಮ ಓದುಗರಿಗೆ – ಮುಖ್ಯವಾಗಿ ಐರೋಪ್ಯರಿಗೆ–ಕೆಲವು 'ಪ್ರಯೋಗಾತ್ಮಕ' ಸೂಚನೆಗಳನ್ನು ಕೊಡುತ್ತಾರೆ! ಮುಂದಿನ ಮಾತುಗಳನ್ನು ಗಮನಿಸಿ:

> ''ಒಂದು ಪಂಗಡದ ಸಂನ್ಯಾಸಿಗಳಿದ್ದಾರೆ; ಅವರು ಹೀಗೆ ಭಸ್ಮವನ್ನು ಬಳಿದುಕೊಂಡು ಕೇವಲ ಕೇಸರಿ ಬಣ್ಣದ ಕೌಪೀನವನ್ನೋ ಅಥವಾ ಭೂರ್ಜಪತ್ರವನ್ನೋ ತೊಗಟೆಯನ್ನೋ ಧರಿಸುತ್ತಾರೆ. ಇಂಥವರೊಬ್ಬರನ್ನು ಸ್ವಲ್ಪ ದೂರದಲ್ಲಿ ಕಂಡಾಗ ನೀವು ಮೊದಲಿಗೆ ಗಮನಿಸುವ ಅಂಶವೆಂದರೆ ಅವರ ಬಿಳುಪು. ನಿಮಗೆ ಅವಕಾಶವಾದಾಗ ಮನೆಯೊಳಗಿನ ಬೆಂಕಿಯ ಗೂಡಿನಿಂದ ಯಾವಾಗಲಾದರೂ ಸ್ವಲ್ಪ ಬೂದಿಯನ್ನು ತೆಗೆದುಕೊಳ್ಳಿ. ಅದನ್ನು ನಿಮ್ಮ ಒಂದು ಕೈಗೂ ತೋಳಿಗೂ ಬಳಿದುಕೊಳ್ಳಿ, ಆಗ ನಿಮಗೆ ಒಂದು ಸತ್ಯ ಗೊತ್ತಾಗುತ್ತದೆ. ಪ್ರಪಂಚದಲ್ಲಿ ಕರಿಯರು ಮತ್ತು ಬಿಳಿಯರು ಎಂದು ಎರಡೇ ಇರುವುದು ಸುಳ್ಳು. ಹಳದಿಯವರು, ನಸುಗೆಂಪಿ ನವರು, ಕಂದುಬಣ್ಣದವರು ಎಲ್ಲರೂ ಇದ್ದಾರೆ – ಬಣ್ಣ ಸ್ವಲ್ಪ ಹೆಚ್ಚು, ಸ್ವಲ್ಪ ಕಡಿಮೆ. ಆದರೆ ಮನುಷ್ಯ ಚರ್ಮ ಬೆಳ್ಳಗಿದ್ದರೆ ಹೇಗಿರುತ್ತದೆ ಎನ್ನುವುದಕ್ಕೆ ಈ ಬೂದಿಯನ್ನು ಬಳಿದುಕೊಂಡೇ ನೋಡಬೇಕು. ಇದರಿಂದ ಈ ಜನಗಳ ಮುಂದಿನ ಭಾವನೆ ಏನೆಂದು ನಿಮಗೆ ಅರ್ಥವಾಯಿತೆ? ಆ ಪರಿಪೂರ್ಣ ಪಾವಿತ್ರ್ಯವೂ ಈ ಬಿಳುಪೂ ಸದಾ ಒಟ್ಟೊಟ್ಟಿಗೇ ಇವೆ.''

ಇದು ನಿವೇದಿತೆಯ ಬರಹದ ಮಾದರಿ. ಶಿವನನ್ನು ಅರ್ಥ ಮಾಡಿಕೊಳ್ಳುವುದೆಂದರೆ ಕೇವಲ ಪುರಾಣದ ಕಥೆಯನ್ನು ಅರ್ಥ ಮಾಡಿಕೊಳ್ಳುವುದಲ್ಲ; ಆ ಶಿವನ ಶಿವತ್ವವು ಹೇಗೆ ಜನರ ಬದುಕಿನ ಅನುಷ್ಠಾನಗಳಲ್ಲಿ ಹಾಸುಹೊಕ್ಕಾಗಿದೆ ಎಂಬುದನ್ನು ಮನದಟ್ಟು ಮಾಡಿಕೊಳ್ಳುವುದು. ಇದನ್ನು ಕೂಡ ಕೇವಲ ಬೌದ್ಧಿಕವಾಗಿ ಗ್ರಹಿಸುವುದಲ್ಲ; ಇದನ್ನು ಇಂದು ಈಗ ನಾವಿರುವ ಸನ್ನಿವೇಶದಲ್ಲೇ ನಮ್ಮ ಅನುಭವವನ್ನಾಗಿ ಮಾರ್ಪಡಿಸಿಕೊಳ್ಳುವುದು. ಶಿವನು ಅರ್ಥವಾಗಬೇಕೆಂದರೆ ಬೂದಿ ಬಳಿದುಕೊಳ್ಳಬೇಕು!

ತಾತ್ತ್ವಿಕ ವಿಕಾಸದಲ್ಲಿ ನಿಸರ್ಗದೊಡಗಿನ ಅನುಸಂಧಾನವು ವಹಿಸಿದ ಪಾತ್ರ ನಿವೇದಿತೆಯ ಬರವಣಿಗೆಯಲ್ಲಿ ಪ್ರಮುಖವಾಗಿ ಕಾಣಿಸಿ ಕೊಳ್ಳುತ್ತದೆ. ನಿಸರ್ಗದ ವ್ಯಕ್ತೀಕರಣದ ಪ್ರಕ್ರಿಯೆಯ ಹಿಂದಿರುವ ಜೀವಂತಿಕೆಯನ್ನು ಅವರು ಪ್ರಧಾನವಾಗಿ ವಿವೇಚಿಸುತ್ತಾರೆ. ಈ ಹಿನ್ನೆಲೆಯಲ್ಲಿ ಹಿಮಾಲಯದ ಸನ್ನಿವೇಶಕ್ಕೂ ಶಿವಕಲ್ಪನೆಗೂ ಇರುವ ಸಂಬಂಧವನ್ನು ಅವರು ವಿವರಿಸಿರುವ ರೀತಿ ಮನೋಜ್ಞವೂ ಕಾವ್ಯಾತ್ಮಕವೂ ಆಗಿದೆ:

> ಆ ಹಿಮಾಚ್ಛಾದಿತ ಶಿಖರಗಳು ಅವರ (ಭಾರತೀಯರ) ಒಲುಮೆಯ ಪ್ರಧಾನ ಕೇಂದ್ರಗಳಾದವು. ನೋಡಿ ಅವುಗಳನ್ನು! ಲೋಕೋತ್ತರವಾಗಿ ಮೌನದಲ್ಲಿ ತಲೆಯೆತ್ತಿ ನಿಂತಿರುವ, ಶೈತ್ಯದಲ್ಲಿಯೂ ಔನ್ನತ್ಯದಲ್ಲಿಯೂ ಅತ್ಯುನ್ನತವಾಗಿದ್ದರೂ ಮಾತಿಗೆ ಮೀರಿದ ಸೌಂದರ್ಯವನ್ನು ಹೊರಸೂಸುತ್ತಿರುವ ಅವುಗಳನ್ನು ಯಾವುದಕ್ಕೆ ಹೋಲಿಸಬಹುದು? ಅವು ಓರ್ವ ಮಹಾಮುನಿಯಂತೆ, ಭಸ್ಮದಿಂದ ಆಚ್ಛಾದಿತವಾಗಿವೆ; ಧ್ಯಾನದಾಳದಲ್ಲಿ ಮುಳುಗಿವೆ; ಶಾಂತ ಮತ್ತು ಏಕಾಂತ! ಅವು, ಅವು ಹೇಗಿವೆಯೆಂದರೆ ಸ್ವಯಂ ಮಹಾದೇವನ ಹಾಗೆ! ಶಿವ, ಮಹಾದೇವ!
>
> ಈ ಭಾವನೆ ಬಂದ ಬಳಿಕ ಹಿಂದೂ ಪ್ರಜ್ಞೆ ಶಿವನಿಗಾಗಿ ಎಲ್ಲ ಬಗೆಯ ಪರಿಕರಗಳನ್ನೂ ಸಂಕೇತಗಳನ್ನೂ ಸೃಜಿಸತೊಡಗಿತು– ಕೆಲವೊಮ್ಮೆ ಉರಿಯ ನಾಲಿಗೆ, ಕೆಲವೊಮ್ಮೆ ಪರ್ವತ, ಕೆಲವೊಮ್ಮೆ ಪ್ರಧಾನವಾಗಿ ಕುಟಿಯ ತಾಪಸಿ – ಇವೆಲ್ಲವೂ ಸೇರಿ ಶಿವನ ಚಿತ್ರವನ್ನು ಪೂರ್ಣಗೊಳಿಸಿದವು – ಮಹಾ ದೇವ!
>
> ಯಜ್ಞಕ್ಕೆ ಮರದ ತುಂಡುಗಳನ್ನು ತರುವುದು ಎತ್ತಿನ ಮೇಲೆ; ಶಿವನು ಏರಿ ಬರುವುದೂ ಎತ್ತನ್ನು.
>
> ಪರ್ವತ ಶಿಖರಗಳ ಮೇಲೆ ಚಂದ್ರನು ಬೆಳಗುತ್ತಾನೆ, ಶಿವನ ನೆತ್ತಿಯ ಮೇಲೆ ಚಂದ್ರನಿರುವನು.
>
> ಬಾಗಿಲಿನಿಂದ ಬಾಗಿಲಿಗೆ ಭಿಕ್ಷೆ ಬೇಡುವ ನಿಜತಾಪಸಿಯಂತೆ ಶಿವನೂ ಸಣ್ಣ ಕೊಡುಗೆಗಳಿಂದಲೇ ತೃಪ್ತನಾಗುವನು.

ನಿವೇದಿತೆಯ ನಿರೂಪಣೆಯಲ್ಲಿ ತಾತ್ತ್ವಿಕತೆಯೂ ಕಾವ್ಯಾತ್ಮಕತೆಯೂ ಸಮರಸಗೊಳ್ಳುವುದನ್ನು ಕಾಣುತ್ತೇವೆ ಇಷ್ಟಾದರೂ ಅವು ಕೇವಲ ಲಹರಿಯ ಬರವಣಿಗೆಯಲ್ಲ. ಅಧ್ಯಯನದ ಒಳನೋಟಗಳನ್ನು ಅವುಗಳಲ್ಲಿ ಸದಾ ಕಾಣಲು ಸಾಧ್ಯವಿದೆ. ನಿವೇದಿತೆ ಪ್ರಾಥಮಿಕವಾಗಿ ಅತ್ಯುತ್ತಮ ಕಥೆಗಾರ್ತಿ. ಅವರು ಏನನ್ನೇ ಹೇಳಲಿ ಅದು ಕಥೆಯಾಗುತ್ತದೆ. ಇಷ್ಟಲ್ಲದೆ ಅದು ನಿರ್ಲಿಪ್ತ ರೀತಿಯ ಕಥಾನಕದ ಮಾದರಿಯಲ್ಲಿ, ಓದುಗನನ್ನು ಸಂಬೋಧಿಸಿಕೊಂಡೇ ಮುಂದುವರಿಯುವ ರೀತಿ ಅವರದು. ಅವರು ನಿರೂಪಿಸುವ ಕಥೆಗಳು ಕೆಲವೊಮ್ಮೆ ಜನಪದ ಮೂಲದಿಂದ ಬಂದಿದ್ದರೆ ಇನ್ನು ಕೆಲವೊಮ್ಮೆ ಪುರಾಣಗಳಿಂದಲೂ ಕಾವ್ಯಗಳಿಂದಲೂ ಆಯ್ದಿರುವಂಥವು.



ಒಬ್ಬ ಬಡ ಬೇಟೆಗಾರನ ಕಥೆಯನ್ನು ನಿವೇದಿತಾ ಹೇಳುತ್ತಾರೆ. ಕಾಡಿನಲ್ಲಿ ದಿನವೆಲ್ಲ ಅಲೆದರೂ ಬೇಟೆ ಸಿಕ್ಕದ ಆತ ರಾತ್ರಿ ಕಾಡಿನಲ್ಲೆ ಉಳಿದು ಆಶ್ರಯಕ್ಕಾಗಿ ಮರವೊಂದನ್ನು ಹತ್ತಿ ಕೂಡುತ್ತಾನೆ. ಅದು ಬಿಲ್ವದ ಮರವಾಗಿರುತ್ತದೆ. ಆ ಮರದ ಕಣ್ಣಿಗೆ ಒಂದು ಶಿವಲಿಂಗ ವಿರುತ್ತದೆ. ಬೇಟೆಗಾರ ಮರದ ಎಲೆಗಳನ್ನು ಕಿತ್ತು ಕಿತ್ತು ಕೆಳಗೆ ಹಾಕಿದಾಗ ಅವು ಆ ಲಿಂಗದ ಮೇಲೆ ಬೀಳುತ್ತವೆ. ತನ್ನ ಹೆಂಡತಿ–ಮಕ್ಕಳು ಹಸಿವಿನಿಂದ ಸಂಕಟಪಡುತ್ತಿರುವುದನ್ನು ನೆನೆದು ದುಃಖಿಸಿದಾಗ ಅವನ ಕಣ್ಣೀರ ಹನಿಗಳು ಲಿಂಗದ ಮೇಲೆ ಉದುರುತ್ತವೆ. ಬಿಲ್ವ ಮರದ ಕೊಂಬೆ ಅವನ ಭಾರಕ್ಕೆ ಕುಸಿದಾಗ ಅವನೂ ನೆಲದ ಮೇಲೆ ಬೀಳುತ್ತಾನೆ. ಅದೇ ರಾತ್ರಿ, ಒಂದು ಕಾಳಸರ್ಪ ಕಡಿದು ಮಡಿಯುತ್ತಾನೆ. ದೇವದೂತರು ಅವನನ್ನು ಶಿವಲೋಕಕ್ಕೆ ಒಯ್ಯುತ್ತಾರೆ. ಅಲ್ಲಿ ಕೆಲವರು ಇದನ್ನು ಆಕ್ಷೇಪಿಸಿದಾಗ ಶಿವ ನುಡಿಯುತ್ತಾನೆ: ''ಯಾಕೆ? ಅವನು ಬಿಲ್ವದಳಗಳಿಂದಲೂ ತನ್ನ ಕಂಬನಿಯಿಂದಲೂ ನನ್ನನ್ನು ಪೂಜಿಸಿಲ್ಲವೆ?''

ಹೀಗೆಯೇ ಅಮೃತಮಥನದ ಸಂದರ್ಭದಲ್ಲಿ ಶಿವನು ಕಾಳಕೂಟವನ್ನು ಕುಡಿದ ಕಥೆಯಿದೆ. ಅನಂತರ ಕಿರಾತ ವೇಷದ ಶಿವನೊಂದಿಗೆ ಹೋರಾಡಿದ ಅರ್ಜುನನ ಕಥೆಯಿದೆ.

ಕಡೆಯಲ್ಲಿ ನಿವೇದಿತಾ ಕಂಡರಿಸುವ ಶಿವನ ಚಿತ್ರ ಹೃದಯಸ್ಪರ್ಶಿಯಾಗಿದೆ. ಶಿವನ ನಿವಾಸವೇನೋ ಶಾಂತವೂ ನೀರವವೂ ಆದ ಮಾನಸ ಸರೋವರದ ಬಳಿಯ ಕೈಲಾಸದಲ್ಲಿ. ಆದರೆ ಜಗತ್ತಿನ ಅದೃಷ್ಟಶಾಲಿಗಳ ನಡುವೆ ಆಶ್ರಯವನ್ನು ಪಡೆಯಲಾಗದ ಚಿತ್ರವಿಚಿತ್ರವಾದದ್ದೆಲ್ಲವೂ ಅವನ ಬಳಿ ನೆರೆದವು! ಸರ್ಪವನ್ನಾತ ಕೊರಳಲ್ಲಿ ಧರಿಸಿದ. ಆಶ್ರಯಕ್ಕಾಗಿ ಧಾವಿಸಿದ ಮುದಿ ಬಸವನನ್ನು ಏರಿ ಕುಳಿತ. ಜಗತ್ತಿಗೆ ಸದಾ ತೊಂದರೆಯನ್ನುಂಟುಮಾಡುವ ಉನ್ಮತ್ತ ಭೂತ–ಪಿಶಾಚಿಗಳ ಗಣವನ್ನು ತನ್ನ ಸಂಗಡಿಗರನ್ನಾಗಿ ಇರಿಸಿಕೊಂಡ. ಹೀಗೆ ಸಕಲ ತ್ಯಾಜ್ಯವೂ ಸ್ವೀಕಾರಾರ್ಹವಾಗಿ ಆತ ದಯೆಯ ಮೂರುತಿಯಾದ.

ಹೀಗೆ ನಿವೇದಿತೆಯ ಕಥಾಪ್ರವಾಹದಲ್ಲಿ ಮೇಲಿನ ಸ್ತರದಲ್ಲಿ ಘಟನಾವಳಿಗಳು ಪ್ರವಹಿಸುತ್ತಿದ್ದರೂ ಅದರ ಅಂತರಾಳದಲ್ಲಿ ಆಧ್ಯಾತ್ಮಿಕ ತಾತ್ತ್ವಿಕತೆಯೊಂದು ಸದಾ ಗುಪ್ತಗಾಮಿನಿಯಾಗಿರುತ್ತದೆ.

ಈ ಕಿರುಹೊತ್ತಿಗೆಯ ಎರಡನೆಯ ಭಾಗದ ಕಥಾನಕದ ಶೀರ್ಷಿಕೆ 'ಬುದ್ಧ ಮತ್ತು ಯಶೋಧರಾ'. ಈ ಕಥಾವಸ್ತು ಮಾತ್ರ ಪರಿಚಿತವಾದುದೇ. ಆದರೆ ಇಲ್ಲಿ ಮುಖ್ಯವಾಗಿ ಗಮನ ಸೆಳೆಯುವುದು ನಿವೇದಿತೆಯ ನಿರೂಪಣಾ ವಿಧಾನ. ಬಹಳಷ್ಟು ಸಲ ನಾವು ನಿರ್ಲಕ್ಷಿಸಬಹುದಾದ ಸಣ್ಣ ವಿವರಗಳನ್ನು ಕೂಡ ವಿಶೇಷಾರ್ಥದ ಕಡೆಗೆ ಕೊಂಡೊಯ್ಯುವಂತೆ ಬಣ್ಣಿಸುವ ರೀತಿ ಮನಸೆಳೆಯುತ್ತದೆ. ಕಥಾಭಿತ್ತಿಯ ನಿರೂಪಣೆ ಕಿರಿದಾಗಿದ್ದರೂ ಕೂಡ ಪಾತ್ರಗಳ ಅಂತರಂಗಪ್ರವೇಶ ಸಾಧ್ಯವಾಗಿರುವುದು ಇಲ್ಲಿನ ಹೆಚ್ಚುಗಾರಿಕೆ, ಇಷ್ಟರ ಜೊತೆಗೆ ಇಲ್ಲಿ ಬುದ್ಧನೊಂದಿಗೆ ಯಶೋಧರೆಯೂ ವಿಶೇಷವಾದ ಪ್ರಾಧಾನ್ಯವನ್ನು ಪಡೆದಿರುವುದು ಗಮನಿಸಬೇಕಾದ ಸಂಗತಿಯಾಗಿದೆ. ಇದು ಕಥಾನಕದ ಶೀರ್ಷಿಕೆಯಲ್ಲೂ ಧ್ವನಿತವಾಗಿದೆ. ಹೀಗಾಗಿ ಇಲ್ಲಿರುವ ಅತ್ಯಂತ ಕಡಮೆಯಾದ ಅವಕಾಶದಲ್ಲೂ ಯಶೋಧರೆಯ ವ್ಯಕ್ತಿತ್ವಕ್ಕೆ ದೊರೆತಿರುವ ಈ ವಿಶೇಷವಾದ ಆಯಾಮದ ಹಿನ್ನೆಲೆಯಲ್ಲಿ ನಿವೇದಿತೆಯ ವೈಯಕ್ತಿಕ ಮನೋಧರ್ಮವೂ ಕೆಲಸ ಮಾಡಿರುವಂತೆ ತೋರುತ್ತದೆ.

'ಶಿವ ಮತ್ತು ಬುದ್ಧ' ಕಿರುಹೊತ್ತಿಗೆ ಗಾತ್ರದಲ್ಲಿ ಚಿಕ್ಕದಾದರೂ ಅದರೊಳಗೆ ಪ್ರತಿಫಲಿತವಾಗಿರುವ ನಿವೇದಿತೆಯ ಪ್ರಾತಿನಿಧಿಕ ವ್ಯಕ್ತಿತ್ವದಿಂದಾಗಿ ಮೌಲಿಕವಾದುದಾಗಿದೆ. ಅಲ್ಲದೆ ಅದರ ಮೂಲಕ ಹೊರಪಡುವ ನಿವೇದಿತೆಯ ಸಾಹಿತ್ಯಾಭಿವ್ಯಕ್ತಿಯ ಕೌಶಲ ಕೂಡ ಆ ವ್ಯಕ್ತಿತ್ವದ ವಿಶೇಷ ಆಯಾಮವೊಂದನ್ನು ಪ್ರಕಟಪಡಿಸುವಲ್ಲಿ ಯಶಸ್ವಿಯಾಗಿದೆ. ಈ ಕುರಿತಾಗಿ ಆನಂದ ಕುಮಾರಸ್ವಾಮಿಯವರ ಮಾತುಗಳು ಗಮನೀಯವಾಗಿವೆ: ''ಸೋದರಿ ನಿವೇದಿತಾ ಭಾರತೀಯ ಜೀವನ ಹಾಗೂ ಸಾಹಿತ್ಯಗಳ ಅಧ್ಯಯನದಲ್ಲಿ ಪಾಶ್ಚಾತ್ಯ ಶಿಕ್ಷಣ ಹಾಗೂ ಸಮಾಜದ ವಿಜ್ಞಾನಗಳ ಅಧಿಕೃತ ಜ್ಞಾನವನ್ನು ಬಳಕೆಗೆ ತಂದರು. ತಾವು ಸಮರ್ಪಿಸಿಕೊಂಡ ದೇಶದ ಜನತೆ ಹಾಗೂ ಆದರ್ಶಗಳ ಬಗೆಗೆ ಅವರ ಅತ್ಯುತ್ಸಾಹವೂ ಅನನ್ಯವಾದುದು... ತಮ್ಮ ಕೃತಿಗಳ ಮೂಲಕ ನಿವೇದಿತಾ ಯೂರೋಪಿಗೆ ಭಾರತದ ವ್ಯಾಖ್ಯಾನಕಾರರು ಮಾತ್ರವೇ ಆಗಿದ್ದಲ್ಲ. ಅದಕ್ಕಿಂತ ಹೆಚ್ಚಾಗಿ ಅವರು ನವಜನಾಂಗದ ಭಾರತೀಯ ವಿದ್ಯಾರ್ಥಿಗಳಿಗೆ ಸ್ಫೂರ್ತಿಯ ಸೆಲೆಯಾಗಿ ಅವರು ಆಂಗ್ಲೀಕರಣಕ್ಕೆ ಹಾತೊರೆವ ಅಗತ್ಯವಿಲ್ಲವೆಂಬುದನ್ನೂ, ಎಲ್ಲಾ ನಿಜವಾದ ಪ್ರಗತಿ ರಾಜಕೀಯ ವಾದವಿವಾದಗಳಿಂದ ಭಿನ್ನವಾಗಿಯೇ ನಿಲ್ಲುವಂಥದಾಗಿದ್ದು, ಅದು ರಾಷ್ಟ್ರೀಯ ಆದರ್ಶಗಳ ಮೇಲೆ, ಅದಾಗಲೇ ಸ್ಪಷ್ಟವಾಗಿ ಧರ್ಮ ಹಾಗೂ ಕಲೆಗಳಲ್ಲಿ ವ್ಯಕ್ತವಾದ ಆಶಯಗಳ ಮೇಲೆ ಅವಲಂಬಿತವಾದುದಾಗಿರಬೇಕು ಎಂಬುದನ್ನೂ ಮನಗಾಣಿಸಿದರು.'' ❖